# ಬಳಕೆದಾರರ ಕಣ್ಣಳತೆಯಲ್ಲಿ ಪ್ರತಿಕ್ರಿಯೆಗಳ ನಿಯಂತ್ರಣ




■ **ಶಶಿಕುಮಾರ್ ಸಿ.**

ಸಾಮಾಜಿಕ ಜಾಲತಾಣಗಳ ಪೈಕಿ ಅತ್ಯಂತ ಪ್ರಭಾವಿಯಾದದ್ದು ‘ಫೇಸ್‌ಬುಕ್’. ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅತ್ಯುತ್ತಮ ವೇದಿಕೆಯಾಗಿರುವ ‘ಫೇಸ್‌ಬುಕ್’ ಈಗಾಗಲೇ ಸಾಕಷ್ಟು ಉಪಯುಕ್ತ ಹಾಗೂ ಅನುಕೂಲಕರ ಫೀಚರ್ಸ್‌ಗಳನ್ನು ತನ್ನ ಬಳಕೆದಾರರಿಗೆ ನೀಡಿದೆ. ಈಗ ಕಮೆಂಟ್‌ಗಳನ್ನು ನಿಯಂತ್ರಿಸುವ ಅಧಿಕಾರವನ್ನು ಬಳಕೆದಾರರ ಕೈಗೆ ಒಪ್ಪಿಸಿದೆ.

ಸಾರ್ವಜನಿಕ ಬದುಕಿನಲ್ಲಿ ವ್ಯಕ್ತವಾಗುವಂತಹ ಭಿನ್ನಾಭಿಪ್ರಾಯಗಳು ಸಾಮಾಜಿಕ ಜಾಲತಾಣಗಳ ಡಿಜಿಟಲ್ ಬದುಕಿನಲ್ಲೂ ವ್ಯಕ್ತವಾಗುತ್ತವೆ. ಇಲ್ಲಿ ತುಸು ಹೆಚ್ಚಾಗಿಯೇ ಸಭ್ಯತೆ ಮೀರಿದ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಯಾರು ತಮ್ಮ ಪೋಸ್ಟ್‌ಗಳಿಗೆ ಕಮೆಂಟ್ ಮೂಲಕ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎಂಬುದನ್ನು ತಾವೇ ನಿರ್ಧರಿಸುವ ಅವಕಾಶ ಇದ್ದಿದ್ದರೆ ಎಷ್ಟೊಂದು ಅನುಕೂಲವಾಗುತ್ತಿತ್ತು ಎಂದನಿಸದೇ ಇರದು. ಇಂಥ ಭಾವನೆಗೆ ಇಂಬು ಕೊಡುವಂತೆ, ಬಳಕೆದಾರರ ಪೋಸ್ಟ್‌ಗಳಿಗೆ ಯಾರೆಲ್ಲ ಕಮೆಂಟ್ ಮಾಡಬಹುದು ಎಂಬುದನ್ನು ನಿರ್ಧರಿಸುವ ಹಕ್ಕನ್ನು ‘ಫೇಸ್‌ಬುಕ್’ ನೀಡಿದೆ.

‘ಈ ಆಯ್ಕೆಯಲ್ಲಿ ಬಳಕೆದಾರರು ತಮ್ಮ ಪೋಸ್ಟ್‌ಗಳಲ್ಲಿ ಯಾರು ಸಾರ್ವಜನಿಕವಾಗಿ ಪ್ರತಿಕ್ರಿಯಿಸಬಹುದು ಎಂಬುದನ್ನು ನಿಯಂತ್ರಿಸುವ ಅವಕಾಶವಿದೆ. ಫೇಸ್‌ಬುಕ್ ಬಳಕೆದಾರರಿಗೆ ತಮ್ಮ ಪ್ರೊಫೈಲ್‌ನಲ್ಲಿ ಕಮೆಂಟ್ ನಿಯಂತ್ರಿಸುವ ಆಯ್ಕೆ ಬಹು ಉಪಯುಕ್ತವಾಗಿದೆ. ಕಳೆದ ವರ್ಷವಷ್ಟೇ ಟ್ವಿಟರ್ ಸಹ ಇಂತಹದ್ದೇ ಆಯ್ಕೆಯನ್ನು ಪರಿಚಯಿಸಿ ಗಮನ ಸೆಳೆದಿತ್ತು. ಅಲ್ಲಿ ಬಳಕೆದಾರರು ತಮ್ಮ ಟ್ವೀಟ್‌ಗಳಿಗೆ ಪ್ರತ್ಯುತ್ತರಗಳನ್ನು ನಿರ್ಬಂಧಿಸಲು ಅವಕಾಶವಿತ್ತು. ಹಾಗೆಯೇ ಫೇಸ್‌ಬುಕ್ ಸಹ ಕಮೆಂಟ್ ನಿರ್ಬಂಧಿಸುವ ಅವಕಾಶ ಒದಗಿಸಿದೆ. ಈ ಹೊಸ ಪರಿಕರಗಳ ಮೂಲಕ ಬಳಕೆದಾರರನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ’ ಎಂದಿದೆ ಫೇಸ್‌ಬುಕ್. ಪೋಸ್ಟ್‌ಗಳಲ್ಲಿನ ಕಮೆಂಟ್‌ಗಳನ್ನು ನಿರ್ಬಂಧಿಸುವುದು ಖಾತೆ ಮಟ್ಟದಲ್ಲಿ ಅಥವಾ ವೈಯಕ್ತಿಕ ಪೋಸ್ಟ್‌ಗಳಲ್ಲಿ ಸಹ ಮಾಡಬಹುದು. ಪೋಸ್ಟ್‌ಗಳನ್ನು ಪಬ್ಲಿಷ್ ಮಾಡುವಾಗಲೇ ತಮ್ಮ ಪೋಸ್ಟ್‌ಗೆ ಯಾರೆಲ್ಲ ಕಮೆಂಟ್ ಮಾಡಬಹುದು ಎಂಬುದನ್ನು ಆಯ್ಕೆ ಮಾಡಬಹುದು.




## ಕಾಮೆಂಟ್ ನಿರ್ಬಂಧ ಹೇಗೆ?

ಈ ಆಯ್ಕೆಯನ್ನು ಸಕ್ರಿಯಗೊಳಿಸಲು ಬಯಸುವವರು ಪ್ರೊಫೈಲ್‌ನಲ್ಲಿರುವ ಪೋಸ್ಟ್‌ಗೆ ಹೋಗಿ ಮೇಲಿನ ಬಲ ಭಾಗದ ಕಾರ್ನರ್‌ನಲ್ಲಿರುವ ಮೂರುಡಾಟ್ ಆಯ್ಕೆಯನ್ನು ಕ್ಲಿಕ್ ಮಾಡಿದರೆ, ನಿಮ್ಮ ಪೋಸ್ಟ್‌ನಲ್ಲಿ ಯಾರು ಕಾಮೆಂಟ್ ಮಾಡಬಹುದು (Who can comment on your post) ಎಂಬ ಪರದೆಯು ತೆರೆದುಕೊಳ್ಳುತ್ತದೆ. ಅದರಲ್ಲಿ ಪಬ್ಲಿಕ್, ಫಾಲೋ ಮಾಡುತ್ತಿರುವ ಪೇಜ್‌ಗಳು, ನೀವು ಸೂಚಿಸಿರುವ ಪ್ರೊಫೈಲ್ ಮತ್ತು ಪೇಜ್‌ಗಳು ಎಂಬ ಮೂರು ಆಯ್ಕೆಗಳಿರುತ್ತವೆ. ಅದರಲ್ಲಿ ಒಂದನ್ನು ನೀವು ಆಯ್ಕೆ ಮಾಡಿಕೊಳ್ಳಬೇಕು.

## ಸುದ್ದಿ ಫೀಡ್ ಮಾಡುವುದು?

ಬಳಕೆದಾರರಿಗೆ ಸೂಕ್ತವಾದದ್ದು ಮತ್ತು ಅವರ ಫೀಡ್‌ನಲ್ಲಿ ಅವರು ಏನನ್ನು ನೋಡಬೇಕೆಂಬುದರ ಬಗ್ಗೆ ಹೆಚ್ಚಿನ ನಿಯಂತ್ರಣವನ್ನು ನೀಡುವ ಸಲುವಾಗಿ ಫೇಸ್‌ಬುಕ್ ನ್ಯೂಸ್ ಫೀಡ್‌ನಲ್ಲಿ ಬದಲಾವಣೆಗಳನ್ನು ಮಾಡುತ್ತಿದೆ. ಫೀಡ್ ಫಿಲ್ಟರ್ ಬಾರ್ ಎಂಬ ನ್ಯೂಸ್ ಫೀಡ್‌ನ ಮೇಲಿರುವ ಹೊಸ ಮೆನು ಬಳಕೆದಾರರಿಗೆ ಫೇವರಿಟೀಸ್ (Favorites) ಮತ್ತು ಮೋಸ್ಟ್ ರೀಸೆಂಟ್ಲಿ (Most Recently) ಫಿಲ್ಟರ್‌ಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಫೇವರಿಟೀಸ್ ಫಿಲ್ಟರ್‌ನೊಂದಿಗೆ, ಬಳಕೆದಾರರಿಗೆ 30 ಪ್ರೊಫೈಲ್‌ಗಳು ಮತ್ತು ಪುಟಗಳಿಂದ ವಿಷಯವನ್ನು ಆದ್ಯತೆ ನೀಡಲು ಅನುಮತಿಸಲಾಗಿದೆ. ಆ ಆಯ್ದ ಖಾತೆಗಳಿಂದ ಪೋಸ್ಟ್ ಅವರ ಫೀಡ್‌ನಲ್ಲಿ ಹೆಚ್ಚು ಕಾಣಿಸುತ್ತದೆ. ಇದು ಅವರ ಪ್ರೊಫೈಲ್‌ನ ಹೆಚ್ಚು ವೈಯಕ್ತಿಕ ನೋಟವನ್ನು ನೀಡುತ್ತದೆ. ■